# ಜ್ಞಾನಮಾರ್ಗ



❖ ಯಾರಲ್ಲಿ ಜ್ಞಾನವಿದೆಯೋ ಆತನಲ್ಲಿ ಅಜ್ಞಾನವೂ ಇದೆ. ನೀನು ಜ್ಞಾನಾಜ್ಞಾನಗಳನ್ನು ದಾಟಿ ಹೋಗು. ಕಾಲಿಗೆ ಮುಳ್ಳು ಚುಚ್ಚಿಕೊಂಡರೆ ಹುಡುಕಿಕೊಂಡು ಹೋಗಿ ಬೇರೊಂದು ಮುಳ್ಳನ್ನು ಸಂಪಾದಿಸಿಕೊಳ್ಳಬೇಕಾಗುತ್ತದೆ. ದೊರೆತ ಮುಳ್ಳಿನಿಂದ ಕಾಲಿಗೆ ಚುಚ್ಚಿಕೊಂಡಿರುವ ಮುಳ್ಳನ್ನು ತೆಗೆದುಹಾಕಿ, ಬಳಿಕ ಎರಡು ಮುಳ್ಳನ್ನೂ ಬಿಸಾಡಬೇಕಾಗುತ್ತದೆ. ಅದಕ್ಕಾಗಿಯೇ ಅಜ್ಞಾನದ ಮುಳ್ಳನ್ನು ತೆಗೆದುಹಾಕಲು ಜ್ಞಾನದ ಮುಳ್ಳನ್ನು ಸಂಪಾದಿಸಿಕೊಳ್ಳಬೇಕು. ಬಳಿಕ ಜ್ಞಾನಾಜ್ಞಾನಗಳನ್ನು ದಾಟಿ ಹೋಗಬೇಕು.

*(ವಚನವೇದ, ಸಂ.೨, ಪು.೨೩೪-೩೬)*

❖ ಭಗವಂತನಲ್ಲಿ ವಿದ್ಯೆ ಅವಿದ್ಯೆ ಎರಡೂ ಇವೆ. ವಿದ್ಯಾಮಾಯೆ ಮನುಷ್ಯನನ್ನು ಭಗವಂತನ ಕಡೆಗೆ ಕರೆದೊಯ್ಯುತ್ತದೆ. ಅವಿದ್ಯಾಮಾಯೆ ಆತನನ್ನು ಭಗವದ್ವಿಮುಖನನ್ನಾಗಿ ಮಾಡುತ್ತದೆ. ಜ್ಞಾನ, ಭಕ್ತಿ, ದಯೆ, ವೈರಾಗ್ಯ – ಇವೆಲ್ಲ ವಿದ್ಯಾರಾಜ್ಯಕ್ಕೆ ಸೇರಿವೆ. ಇವನ್ನು ಆಶ್ರಯಿಸಿದರೆ ಭಗವಂತನ ಹತ್ತಿರಕ್ಕೆ ಹೋಗಬಹುದು. ಅಲ್ಲಿಂದ ಮುಂದಕ್ಕೆ ಒಂದು ಹೆಜ್ಜೆ ಹಾಕಿತು ಎಂದರೆ ಭಗವಂತ ದೊರೆತುಬಿಡುತ್ತಾನೆ. ಬ್ರಹ್ಮಜ್ಞಾನ ದೊರೆತುಬಿಡುತ್ತದೆ.

*(ವಚನವೇದ, ಸಂ.೨, ಪು.೩೨೯)*

❖ ಪುಸ್ತಕ ಓದದೆ ಜ್ಞಾನ ದೊರೆಯದು, ವಿದ್ಯೆ ದೊರೆಯದು ಅಂತ ಅನೇಕರು ಭಾವಿಸುತ್ತಾರೆ. ಆದರೆ ಓದುವುದಕ್ಕಿಂತ ಕೇಳುವುದು ಮೇಲು. ಕೇಳುವುದಕ್ಕಿಂತ ನೋಡುವುದು ಮೇಲು. ಕಾಶಿಯ ವಿಷಯವಾಗಿ ಓದುವುದಕ್ಕೂ, ಕಾಶಿಯ ವಿಷಯವಾಗಿ ಕೇಳುವುದಕ್ಕೂ, ಕಾಶಿಯ ದರ್ಶನ ಮಾಡುವುದಕ್ಕೂ ಒಂದೊಂದಕ್ಕೂ ಇರುವ ತಾರತಮ್ಯ ಬಹಳ ಹೆಚ್ಚು.

*(ವಚನವೇದ, ಸಂ.೨, ಪು.೯೬೧)*

❖ ಎಲ್ಲಿಯವರೆಗೆ ಜ್ಞಾನವನ್ನು ಪಡೆದುಕೊಂಡಿಲ್ಲವೋ, ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಂಡಿಲ್ಲವೋ ಅಲ್ಲಿಯವರೆಗೆ ಮತ್ತೆ ಜನ್ಮವೆತ್ತಬೇಕಾಗುತ್ತದೆ. ಅದರಿಂದ ಬಿಡುಗಡೆ ಎಂಬುದು ಇಲ್ಲವೇ ಇಲ್ಲ. ಅದುವರೆಗೆ ಪರಲೋಕ ಎಂಬುದು ಇದ್ದೇ ಇದೆ. ಜ್ಞಾನ ದೊರೆತರೆ, ಭಗವಂತನ ದರ್ಶನ ದೊರೆತರೆ, ಮುಕ್ತಿ ದೊರೆತುಬಿಡುತ್ತದೆ – ಬಳಿಕ ಪುನರ್ಜನ್ಮವಿಲ್ಲ. ಬೇಯಿಸಿದ ಬತ್ತವನ್ನು ಬಿತ್ತಿದರೆ ಅದು ಮೊಳೆಯದು. ಯಾರಾದರೂ ಜ್ಞಾನಾಗ್ನಿಯಲ್ಲಿ ಬೆಂದು ಹೋಗಿ ಬಿಟ್ಟಿರುವುದಾದರೆ, ಅವರಿಂದ ಸೃಷ್ಟಿಯ ಯಾವ ಕಾರ್ಯವೂ ನಡೆಯದು.

*(ವಚನವೇದ, ಸಂ.೨, ಪು.೧೬೮)*

❖ ನಾನಾತ್ವದ ಜ್ಞಾನವೇ ಅಜ್ಞಾನ. ಸರ್ವಭೂತಗಳಲ್ಲಿಯೂ ಭಗವಂತನಿದ್ದಾನೆ ಎಂಬ ಜ್ಞಾನವೇ 'ಜ್ಞಾನ'. ಭಗವಂತನನ್ನು ವಿಶೇಷ ರೂಪದಿಂದ – ಆತನೊಡನೆ ಮಾತುಕತೆಯಾಡುವುದು, ಆತನನ್ನು ಆತ್ಮೀಯನೆಂಬ ಬೋಧೆಯಿಂದ ನೋಡುವುದು ಇವೇ ಮೊದಲಾದ ರೀತಿಯಿಂದ – ಅರಿತುಕೊಳ್ಳುವುದಕ್ಕೆ 'ವಿಜ್ಞಾನ' ಅಂತ ಹೆಸರು.

*(ವಚನವೇದ, ಸಂ.೨, ಪು.೪೩೧)*

❖ ಈ 'ನಾನು' ಎಂಬುದು ಯಾರು ಎಂಬುದನ್ನು ಮೊದಲು ಪತ್ತೆ ಮಾಡಿ ನೋಡು. ಈ 'ನಾನು' ಎಂಬುದು ಎಲುಬೆ, ಮಾಂಸವೆ, ರಕ್ತವೆ ಅಥವಾ ಕರುಳೆ? 'ನಾನು' ಎಂಬುದು ಯಾರು ಎಂಬುದನ್ನು ಪತ್ತೆಮಾಡಲು ಹೋಗಿ 'ನೀನು' ಎಂಬುದು ಪತ್ತೆಯಾಗಿಬಿಡುತ್ತದೆ. ಅಂದರೆ, ನಮ್ಮ ಅಂತರ್ಯದಲ್ಲಿ ಭಗವಂತನ ಶಕ್ತಿ ಹೊರತು ಇನ್ನು ಬೇರೆ ಏನೂ ಇಲ್ಲ ಅಂತ. 'ನಾನು' ಎಂಬುದು ಇಲ್ಲವೇ ಇಲ್ಲ, ಇರುವವನು ಆತ ಮಾತ್ರವೇ.

*(ವಚನವೇದ, ಸಂ.೨, ಪು.೩೮೩)*

❖ ಪೂರ್ಣಜ್ಞಾನ, ಪೂರ್ಣಭಕ್ತಿ ಎರಡೂ ಒಂದೇ. 'ನೇತಿ', 'ನೇತಿ', ಮಾರ್ಗವನ್ನು ಅನುಸರಿಸಿ ವಿಚಾರ ಕೊನೆಗೊಂಡಿತು ಅಂದರೆ ಬ್ರಹ್ಮಜ್ಞಾನ. ಬಳಿಕ ಸಾಧಕ ಯಾವುದನ್ನು ತ್ಯಜಿಸಿ ಮುಂದೆ ಹೋಗಿದ್ದನೋ, ಅದನ್ನೇ ಆತ ಬ್ರಹ್ಮ ಅಂತ ಸ್ವೀಕರಿಸುತ್ತಾನೆ.

*(ವಚನವೇದ, ಸಂ.೨, ಪು.೩೮೩)*

*'ಶ್ರೀರಾಮಕೃಷ್ಣ ವಚನವೇದ'ದಿಂದ*